**ಪಿ ಆ್ಯಂಡ್ ಎಸ್ ಸಿ. ನಂ. 10/2017**

**ಪಿ. ಡಬ್ಲ್ಯೂ.- 2**

**ಸಾಕ್ಷಿಯು ದಿನಾಂಕಃ** 09-09-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಕೆ ಆರ್ ಪಿ., ವಕೀಲರಿಂದ</u>**

ಕಣ್ಣನ್ ರವರ ತಂದೆ ಗೋಪಾಲ ಮತ್ತು ತಾಯಿ ಗೋವಿಂದಮ್ಮ. ಕಣ್ಣನ್ ರವರ ಹೆಂಡತಿಯ ಹೆಸರು ಶಾಂತಿ ಅಂದರೆ 1 ನೇ ಅರ್ಜಿದಾರರು. ನಮ್ಮ ಅರ್ಜಿಯಲ್ಲಿ 1 ನೇ ಅರ್ಜಿದಾರರು ಕಣ್ಣನ್ ರವರ 2 ನೇ ಹೆಂಡತಿ ಎಂದು ಬರೆಯಲಾಗಿದೆ ಅಂದರೆ ಸರಿ. ಕಣ್ಣನ್ ರವರ ಮೊದಲ ಹೆಂಡತಿ ಅಮುದಾವಲಿ ಅಂದರೆ 1 ನೇ ಎದುರುದಾರರು. 1 ನೇ ಎದುರುದಾರರಿಗೆ 2 ನೇ ಎದುರುದಾರರು ಮಗಳು ಅಂದರೆ ನನಗೆ ಗೊತ್ತಿಲ್ಲ. ಪ್ರಕರಣವನ್ನು ಕೇವಲ 1 ನೇ ಎದುರುದಾರನ ವಿರುದ್ಧ ಮಾತ್ರ ದಾಖಲಿಸಿರುತ್ತೇನೆ.

ನನ್ನ ಅಕ್ಕ ನಂದಿನಿ ಟಿ ಬಿ ಡ್ಯಾಂ ನ ನೇತಾಜಿ ನಗರದಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಓದಿರುತ್ತಾರೆ ಅಂದರೆ ಸರಿಯಲ್ಲ. ನನ್ನ ಅಕ್ಕ ಯಾವುದೇ ಶಾಲೆಯಲ್ಲಿ ಓದಿರುವುದಿಲ್ಲ. ನನ್ನ ಅಕ್ಕ ದಿಃ 05-07-1991 ರಂದು ಜನಿಸಿರುತ್ತಾರೆ. ನನ್ನ ಅಕ್ಕ ಮೇಲೆ ಹೇಳಿದ ಶಾಲೆಯಲ್ಲಿಯೇ ಓದಿದ್ದು, ಆಕೆಯ ತಂದೆಯ ಹೆಸರು ಸೆಲ್ವಂ ಎಂದು ಶಾಲಾ ದಾಖಲಾತಿಗಳಲ್ಲಿ ನಮೂದಾಗಿದೆ ಅಂದರೆ ಸರಿಯಲ್ಲ. ಕಣ್ಣನ್ ರವರ ಮತ್ತು 1 ನೇ ಎದುರುದಾರರ ವೈವಾಹಿಕ ಸಂಬಂಧ ಹೇಗಿತ್ತು ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರ ವಿವಾಹ ಆದ ಬಗ್ಗೆ ನನ್ನ ತಾಯಿಗೆ ಗೊತ್ತಿರಲಿಲ್ಲ, ಮದುವೆಯಾದ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

**ಪಿ ಆ್ಯಂಡ್ ಎಸ್ ಸಿ. ನಂ. 10/2017**

**ಪಿ. ಡಬ್ಲ್ಯೂ.- 2**

ಕಣ್ಣನ್ ರವರು ಟಿ ಬಿ ಬೋರ್ಡ ನಲ್ಲಿ ಕೆಲಸ ಮಾಡುತ್ತಿದ್ದರು ಅಂದರೆ ಸರಿ. ಸದರಿಯವರ ಸೇವಾಪುಸ್ತಕದಲ್ಲಿ 1 ನೇ ಎದುರುದಾರಳ ಹೆಸರನ್ನು ಹೆಂಡತಿ ಎಂದು ನಮೂದು ಮಾಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ಸೇವಾ ಪುಸ್ತಕದಲ್ಲಿ ಆಕೆಯ ಗಂಡನ ಹೆಸರು ಸೆಲ್ವಂ ಎಂದು ನಮೂದಗಿದೆ ಅಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಎಲ್ಲಾ ದಾಖಲೆಗಳಲ್ಲಿ 2012 ರ ನಂತರ ಕಣ್ಣನ್ ರವರ ಹೆಸರನ್ನು ನಮೂದು ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ. ಕಣ್ಣನ್ ರವರಿಗೂ ಮತ್ತು ನಮ್ಮ ಕುಟುಂಬಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ನಾನು, ನನ್ನ ತಾಯಿ ಮತ್ತು ನನ್ನ ಅಕ್ಕ ಸೆಲ್ವಂ ಕುಟುಂಬದವರು ಅಂದರೆ ಸರಿಯಲ್ಲ. ಕಣ್ಣನ್ ರವರು ಮೃತ ಪಟ್ಟ ನಂತರ ಅವರ ಕುಟುಂಬಕ್ಕೆ ಬರುವ ಪರಿಹಾರ ಮತ್ತು ಅನುಕಂಪ ಆಧಾರಿತ ಕೆಲಸ ಪಡೆಯುವ ದುರುದ್ದೇಶದಿಂದ ನಾವೇ ಅವರ ಕುಟುಂಬದವರು ಎಂದು ಸುಳ್ಳು ಅರ್ಜಿ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. ಕಣ್ಣನ್ ರವರ ಮರಣಾ ನಂತರ ಬರುವ ಪರಿಹಾರ ಮತ್ತು ಅನುಕಂಪ ಆಧಾರಿತ ಕೆಲಸವನ್ನು ಪಡೆಯಲು ನಾನು ಅರ್ಹನಲ್ಲ ಅಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 3 ರಿಂದ 6 ನೇ ಎದುರುದಾರರ ಪರ</u>**

**<u>ಶ್ರೀಮತಿ ಎ ಎಸ್ ಬಿ., ವಕೀಲರಿಂದ</u>**

ನನಗೆ **25** ವರ್ಷ ವಯಸ್ಸು. ನಮ್ಮ ಮನೆಯ ಎಲ್ಲಾ ಜವಾಬ್ದಾರಿಗಳನ್ನು ನನ್ನ ತಾಯಿಯೇ ವಹಿಸಿಕೊಂಡಿರುತ್ತಾರೆ. ನನ್ನ ತಾಯಿ ಮತ್ತು ಕಣ್ಣನ್ ಮದುವೆ ಆದ ವಿಚಾರವನ್ನು ಟಿ ಬಿ ಬೋರ್ಡ ರವರಿಗೆ ತಿಳಿಸಲಾಗಿದೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ.

**ಪಿ ಆ್ಯಂಡ್ ಎಸ್ ಸಿ. ನಂ. 10/2017**
**ಪಿ. ಡಬ್ಲ್ಯೂ.- 2**

ನನಗೆ **18** ವರ್ಷ ವಯಸ್ಸಾದ ನಂತರ ಅಥವಾ ತಿಳುವಳಿಕೆ ಬಂದ ನಂತರ ಕಣ್ಣನ್ ರವರ ಸೇವಾ ಪುಸ್ತಕದಲ್ಲಿ ಯಾರ ಯಾರ ಹೆಸರುಗಳು ನಮೂದಾಗಿವೆ ಎಂದು ನಾನು ತಿಳಿದುಕೊಳ್ಳಲು ಹೋಗಿಲ್ಲ. ಈ ಅರ್ಜಿಯನ್ನು ನಾನು ಮತ್ತು ನನ್ನ ತಾಯಿಯೇ ಸಲ್ಲಿಸಿರುತ್ತೇವೆ. **3** ರಿಂದ **6** ರ ಎದುರುದಾರರ ಬಗ್ಗೆ ನನಗೆ ಗೊತ್ತಿಲ್ಲ. ಸರ್ಕಾರಿ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲು ಯಾವ ಪ್ರಕ್ರಿಯೆನ್ನು ಪಾಲನೆ ಮಾಡಬೇಕು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ವಕೀಲರಿಗೆ ಗೊತ್ತಿತ್ತು ಎಂದು ನುಡಿಯುತ್ತಾರೆ. ಟಿ ಬಿ ಬೋರ್ಡನ ಅಧಿಕಾರಿಗಳಿಗೆ ನಾವು ಯಾವುದೇ ನೋಟಿಸ್ ನೀಡಿಲ್ಲ ಅಂದರೆ ಸರಿಯಲ್ಲ. ಸದರಿ ನೋಟಿಸ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ. **3** ರಿಂದ **6** ನೇ ಎದುರುದಾರರ ವಿರುದ್ಧ ಯಾವ ಕಾರಣಕ್ಕೆ ಅರ್ಜಿ ಸಲ್ಲಿಸಿರುತ್ತೇನೆ ಎಂದು ಗೊತ್ತಿಲ್ಲದ ಕಾರಣ ನನ್ನ ಅರ್ಜಿ ಅವರ ವಿರುದ್ಧ ಊರ್ಜಿತವಾಗುವುದಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ., ಹೊಸಪೇಟೆ.